ಹೊರಗೆ ಗಾಢಾಂಧಕಾರದ ಜತೆಗೆ ಶೀತಲ ಗಾಳಿ ದೊಡ್ಡ ಶಬ್ದದೊಂದಿಗೆ ಬೀಸುತ್ತಿತ್ತು. ಒಳಗೆ, ವೈಟ್ ಅವರು ಹಜಾರದ ಕಿಟಕಿಗಳನ್ನು ಮುಚ್ಚಿದ್ದರಿಂದ ವಾತಾವರಣ ಬೆಚ್ಚಗಿತ್ತು. ಒಂದು ಮೂಲೆಯಲ್ಲಿ ಅಗ್ಗಿಷ್ಟಿಕೆ ಉರಿಯುತ್ತಲಿದ್ದು, ತಂದೆ ಮತ್ತು ಮಗ ಇಬ್ಬರೂ ಚೆಸ್ ಆಡುವುದರಲ್ಲಿ ಮಗ್ನರಾಗಿದ್ದರು. ಚೆಸ್ ಆಡುವುದರಲ್ಲಿ ಮಗನಿಗಿಂತಲೂ ತಂದೆ ಹೆಚ್ಚು ನುರಿತವನಾಗಿದ್ದರಿಂದ ತನ್ನ ರಾಜನನ್ನು ಅಪಾಯದ ಮಾರ್ಗದಲ್ಲಿ ನಡೆಸುವ ಧೈರ್ಯ ಮಾಡಿದ್ದ. ಈ ಬಗ್ಗೆ, ಅಗ್ಗಿಷ್ಟಿಕೆಯ ಬಳಿ ಕುಳಿತುಕೊಂಡು ಕಸೂತಿಯಲ್ಲಿ ನಿರತಳಾಗಿದ್ದ ಬಿಳಿ ಕೂದಲಿನ ಯಜಮಾನಿ, ಮಿಸೆಸ್ ವೈಟ್ ಗಂಡನನ್ನು ಆಗಾಗ್ಗೆ ಚುಚ್ಚುತ್ತಿದ್ದಳು.

'ಇವತ್ತು ಈ ಗಾಳಿಗೆ ಏನಾಗಿದೆ?' ಅಪಾಯದ ನಡೆ ನಡೆಸಿ ಸಂಕಷ್ಟದಲ್ಲಿದ್ದ ತನ್ನ ರಾಜನನ್ನು ಮಗ ನೋಡದಿರಲೆಂದು, ಅವನ ಗಮನ ಬೇರೆಡೆ ಸೆಳೆಯಲು ಮಿಸ್ಟರ್ ವೈಟ್ ಈ ಕುತಂತ್ರ ಹೂಡಿದ್ದ.

'ನನಗೂ ಕೇಳಿಸುತ್ತಿದೆ ಡ್ಯಾಡಿ.' ಮಗ ತಲೆಯನ್ನು ಮೇಲಕೆತ್ತದೆಯೇ ಹೇಳಿ ಬೋರ್ಡಿನ ಮೇಲೆ ಒಮ್ಮೆ ಸೂಕ್ಷ್ಮವಾಗಿ ಕಣ್ಣಾಡಿಸಿದ. ತಂದೆಯ ರಾಜನ ಮೇಲೆ ಆಕ್ರಮಣ ನಡೆಸಿ 'ಚೆಕ್' ಎಂದ.

'ಅವನು ಇಂದಿನ ರಾತ್ರಿ ಬರುತ್ತಾನೆಂದು ನಾನು ನಂಬಲಾರೆ...' ಬೋರ್ಡಿನ ಮೇಲೆ ಕೈಯಾಡಿಸುತ್ತಾ ವೈಟ್ ಹೇಳಿದ.

'ಚೆಕ್ ಮೇಟ್!' ಎಂದು ಮಗ ಆಟ ಮುಗಿಸಿದ.

'ಇಂತಹ ನಿರ್ಜನ, ಸುಡುಗಾಡು ಪ್ರದೇಶದಲ್ಲಿ ಏಕಾಂಗಿಗಳಾಗಿ ವಾಸಮಾಡುವುದು, ಅದೂ ಇಂತಹ ರಾತ್ರಿಗಳಲ್ಲಿ, ಒಂದು ಶಾಪ ಅಂತಲೇ ಹೇಳಬೇಕು. ಸರಿಯಾದ ಒಂದು ರಸ್ತೆಯೂ ಇಲ್ಲ, ದರಿದ್ರ. ಮಳೆಗಾಲ ಮತ್ತು ಕತ್ತಲ ರಾತ್ರಿಗಳಲ್ಲಿ ದೇವರೇ ಕಾಪಾಡಬೇಕು.' ಅಕಾರಣವಾಗಿ ಮಿಸ್ಟರ್ ವೈಟನ ದನಿಯಲ್ಲಿ ಆಕ್ರೋಶ ಕಾಣುತ್ತಿತ್ತು.

'ಬೇಜಾರು ಮಾಡಿಕೊಳ್ಳಬೇಡಿ ಡಿಯರ್...' ಮಿಸೆಸ್ ವೈಟ್ ನಗುತ್ತಾ ಹೇಳಿದಳು. 'ಮುಂದಿನ ಆಟದಲ್ಲಿ ಖಂಡಿತವಾಗಿಯೂ ನೀವೇ ಗೆಲ್ಲುತ್ತೀರ!'

ಮಿಸ್ಟರ್ ವೈಟ್ ತಲೆ ಎತ್ತಿ ಹೆಂಡತಿಯನ್ನೊಮ್ಮೆ ತೀಕ್ಷ್ಣವಾಗಿ ನೋಡಿದ. ತಾಯಿ ಮತ್ತು ಮಗ ಇಬ್ಬರೂ ಅರ್ಥಗರ್ಭಿತ ನಗೆಯನ್ನು ವಿನಿಮಯ ಮಾಡಿಕೊಂಡರು.

'ಅಗೋ, ಅವರು ಬಂದೇ ಬಿಟ್ಟರು!' ಹರ್ಬರ್ಟ್ ವೈಟ್ ಹೇಳಿದ. ಹೊರಗೆ ಗೇಟು ತೆರೆದ ಶಬ್ದದ ಜತೆಗೆ ಭಾರವಾದ ಬೂಟುಗಾಲಿನ ಸದ್ದು ಮುಂಬಾಗಿಲಿನ ವರೆಗೆ ಕೇಳಿಸಿತು.

ವೈಟ್ ಎದ್ದು ಮುಂಬಾಗಿಲಿನ ಕಡೆಗೆ ಹೆಜ್ಜೆ ಹಾಕಿದ. ಬಾಗಿಲು ತೆರೆದ ಶಬ್ದವೂ ಕೇಳಿಸಿತು. ಅಸ್ಪಷ್ಟ ಮಾತುಕತೆ. ಮಿಸ್ಟರ್ ವೈಟ್‌ನೊಟ್ಟಿಗೆ ಬಂದಿದ್ದ ವ್ಯಕ್ತಿ ಎತ್ತರಕ್ಕಿದ್ದು ದೈಹಿಕವಾಗಿ ಗಟ್ಟಿಮುಟ್ಟಾಗಿದ್ದ. ಅವನ ತುಂಬಿದ ಮಾಂಸಲ ಮುಖ ಕಳಿತ ಟೊಮೆಟೊ ಥರ ಹೊಳೆಯುತ್ತಿತ್ತು.

'ಸಾರ್ಜೆಂಟ್ ಮೇಜರ್ ಮೊರಿಸ್...' ಮಿಸ್ಟರ್ ವೈಟ್ ಬಂದ ವ್ಯಕ್ತಿಯನ್ನು ಪರಿಚಯಿಸಿದ.

ಮೇಜರ್ ಸಾಹೇಬರು ಎಲ್ಲರೊಂದಿಗೆ ಕೈ ಮಿಲಾಯಿಸಿ, ಮಿಸೆಸ್ ವೈಟ್, ಅಗ್ಗಿಷ್ಟಿಕೆಯ ಬಳಿ ತೋರಿಸಿದ ಕುರ್ಚಿಯ ಮೇಲೆ ಸಂತೋಷದಿಂದ ಕುಳಿತುಕೊಂಡರು. ಮಿಸ್ಟರ್ ವೈಟ್ ವಿಸ್ಕಿಯ ಬಾಟಲ್ ಮತ್ತು ಎರಡು ಲೋಟಗಳನ್ನು ತಂದರು.

ಮೂರನೆ ಪೆಗ್ ಹೊಟ್ಟೆಗೆ ಇಳಿದಂತೆ ಮೇಜರ್ ಮೊರಿಸ್ ಕೊಂಚ ಸಡಿಲರಾದರು. ಬೆಂಕಿಯ ಬಳಿ ಕುಳಿತಿದ್ದರಿಂದಲೂ ಮತ್ತು ಹೊಟ್ಟೆಗೆ ಇಳಿದಿದ್ದ ವಿಸ್ಕಿಯ ಪ್ರಭಾವದಿಂದಲೂ ಅವರ ಮುಖ ಪಾಲಿಶ್ ಮಾಡಿದಂತೆ ಮಿರಮಿರನೆ ಮಿಂಚುತ್ತಿತ್ತು. ಅವರೀಗ ಮಾತನಾಡಲು